ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
**KARNATAKA LEGISLATIVE ASSEMBLY RESEARCH AND REFERENCE BRANCH**

ಪತ್ರಿಕಾ ತುಣುಕುಗಳು
**PAPER CLIPPINGS**

ಇಲಾಖೆ / ವಿಷಯ : DEPARTMENT / SUBJECT: ಶಿಕ್ಷಣ

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯ ವಾಣಿ    ದಿನಾಂಕ : DATE : 12/6/2020

# ಬೆಂಗ್ಳೂರು ಐಐಎಸ್‌ಸಿ ನಂ.2

12-06-2020



» 2020ರ ಸಾಲಿನ ಉನ್ನತ ಶಿಕ್ಷಣ ಸಂಸ್ಥೆಗಳ ಪಟ್ಟಿ ಬಿಡುಗಡೆ

**ನವದೆಹಲಿ:** ಉನ್ನತ ಶಿಕ್ಷಣ ಸಂಸ್ಥೆಗಳ 2020ರ ಪಟ್ಟಿಯನ್ನು ಗುರುವಾರ ಬಿಡುಗಡೆ ಮಾಡಲಾಗಿದ್ದು, ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆ (ಐಐಎಸ್‌ಸಿ) ಎರಡನೇ ಸ್ಥಾನ ಪಡೆದಿದೆ. ಕೇಂದ್ರ ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವ ರಮೇಶ್ ಪೋಖ್ರಿಯಾಲ್ ಪಟ್ಟಿ ಬಿಡುಗಡೆ ಮಾಡಿದರು. ಐಐಟಿ-ಮದ್ರಾಸ್, ಐಐಎಸ್‌ಸಿ-ಬೆಂಗಳೂರು ಮತ್ತು ಐಐಟಿ-ದೆಹಲಿ ಮೊದಲ ಮೂರು ಸ್ಥಾನಗಳನ್ನು ಪಡೆದಿವೆ. ಸಂಸ್ಥೆಗಳ ಕಾರ್ಯ ನಿರ್ವಹಣೆ ಆಧಾರದಲ್ಲಿ ವಿವಿಧ ವಿಭಾಗಗಳಲ್ಲಿ ಐದು ವಿಭಿನ್ನ ಮಾನದಂಡಗಳ ಆಧಾರದಲ್ಲಿ ರ‍್ಯಾಂಕ್ ನೀಡಲಾಗಿದೆ. ರಾಷ್ಟ್ರೀಯ ಸಾಂಸ್ಥಿಕ ರ‍್ಯಾಂಕಿಂಗ್ ಚೌಕಟ್ಟು (ಎನ್ಐಆರ್‌ಎಫ್-ನಿರ್ಫ್) ಎಂದು ಈ ರ‍್ಯಾಂಕಿಂಗನ್ನು ಕರೆಯಲಾಗುತ್ತದೆ.

ವಾರ್ಷಿಕ ರ‍್ಯಾಂಕಿಂಗ್ ಪ್ರಕಾರ, ಐಐಎಸ್‌ಸಿ ಬೆಂಗಳೂರು, ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯ (ಜೆಎನ್‌ಯು) ಮತ್ತು ಬನಾರಸ್ ಹಿಂದು ವಿಶ್ವವಿದ್ಯಾಲಯ ಮೊದಲ ಮೂರು ಉನ್ನತ ವಿಶ್ವವಿದ್ಯಾಲಯಗಳಾಗಿವೆ. ಐಐಎಂ ಅಹಮದಾಬಾದ್ ಅತ್ಯುನ್ನತ ಬಿಜಿನೆಸ್ ಸ್ಕೂಲ್ ಎಂದು ಮಾನ್ಯವಾಗಿದ್ದು ನಂತರದ ಎರಡು ಸ್ಥಾನಗಳು ಐಐಎಂ ಬೆಂಗಳೂರು ಹಾಗೂ ಕೋಲ್ಕತಾ ಪಾಲಾಗಿವೆ. ಕಾಲೇಜುಗಳ ಪೈಕಿ ಮಿರಾಂಡಾ ಕಾಲೇಜ್, ಲೇಡಿ ಶ್ರೀರಾಮ್ ಮಹಿಳಾ ಕಾಲೇಜು ಮತ್ತು ಸೇಂಟ್ ಸ್ಟೀಫನ್ಸ್ ಕಾಲೇಜ್ ಮೊದಲ ಮೂರು ಸ್ಥಾನ ಗಳಿಸಿವೆ. ಎಂಜಿನಿಯರಿಂಗ್ ಶಿಕ್ಷಣ ವಿಭಾಗದಲ್ಲಿ ಮೊದಲ ಮೂರು ರ‍್ಯಾಂಕ್ ಐಐಟಿ-ಮದ್ರಾಸ್, ದೆಹಲಿ ಮತ್ತು ಮುಂಬೈ ಪಾಲಾಗಿವೆ. ಫಾರ್ಮಸಿ ಶಿಕ್ಷಣ ವಿಭಾಗದ ಮೊದಲ ಮೂರು ಸ್ಥಾನಗಳನ್ನು ದೆಹಲಿಯ ಹಮದರ್ದ್, ಚಂಡೀಗಢದ ಪಂಜಾಬ್ ವಿಶ್ವವಿದ್ಯಾಲಯ ಹಾಗೂ ಮೊಹಾಲಿ ರಾಷ್ಟ್ರೀಯ ಫಾರ್ಮಾಸ್ಯುಟಿಕಲ್ ಸಂಶೋಧನಾ ಸಂಸ್ಥೆ ಪಡೆದಿವೆ.

...ಗಿಸಿದಾರೆ.